**Marking Scheme**

**Strictly Confidential**

**(For Internal and Restricted use only)**

**Senior Secondary School Examination, 2026 (XII$^{th}$)**

**SUBJECT NAME: -KANNADA (Q.P. CODE – 115/15**

**General Instructions: -**

| | |
|---|---|
| **1** | The CBSE has decided to introduce On Screen Marking (OSM) for the evaluation of Class XII answer Book with the 2026 Examination. |
| **2** | You are aware that evaluation is the most important process in the actual and correct assessment of the candidates. A small mistake in evaluation may lead to serious problems which may affect the future of the candidates, education system and teaching profession. To avoid mistakes, it is requested that before starting evaluation, you must read and understand the spot evaluation guidelines carefully. |
| **3** | **"Evaluation policy is a confidential policy as it is related to the confidentiality of the examinations conducted, evaluation done and several other aspects. Its leakage to public in any manner could lead to derailment of the examination system and affect the life and future of millions of candidates. Sharing this policy/document to anyone, publishing in any magazine and printing in Newspaper/Website, etc. may invite action under various rules of the Board and IPC."** |
| **4** | Evaluation is to be done as per instructions provided in the Marking Scheme. It should not be done according to one's own interpretation or any other consideration. Marking Scheme should be strictly adhered to and religiously followed. **However, while evaluating, answers which are based on latest information or knowledge and/or are innovative, they may be assessed for their correctness otherwise and due marks be awarded to them. In Class-XII, while evaluating two competency-based questions, please try to understand given answer and even if reply is not from marking scheme but correct competency is enumerated by the candidate, due marks should be awarded.** |
| **5** | The Marking scheme carries only suggested value points for the answers.<br><br>These are in the nature of Guidelines only and do not constitute the complete answer. The students can have their own expression and if the expression is correct, the due marks should be awarded accordingly. |
| **6** | The Head-Examiner must go through the first five answer books evaluated by each evaluator on the first day, to ensure that evaluation has been carried out as per the instructions given in the Marking Scheme. If there is any variation, the same should be zero after deliberation and discussion. The remaining answer books meant for evaluation shall be given only after ensuring that there is no significant variation in the marking of individual evaluators. |
| **7** | Evaluators will mark ( √ ) wherever answer is correct. For wrong answer CROSS 'X' be marked. Evaluators will not put right (**✓)** while evaluating which gives an impression that answer is correct and no marks are awarded. **This is most common mistake which evaluators are committing.** |
| **8** | If a question has parts, please award marks on the right-hand side for each part in the OSM Portal. Marks awarded for different parts of the question will be totaled up by the OSM System. |

| | |
|---|---|
| **9** | If a question does not have any parts, marks must be awarded in the left-hand margin in the OSM Portal. This may also be followed strictly. |
| **10** | No marks to be deducted for the cumulative effect of an error. It should be penalized only once. |
| **11** | A full scale of marks 80 (example 0 to 80/70/60/50/40/30 marks as given in Question Paper) has to be used. Please do not hesitate to award full marks if the answer deserves it. |
| **12** | Every examiner has to necessarily do evaluation work for full working hours i.e., 8 hours every day and evaluate 20 answer books per day in main subjects and 25 answer books per day in other subjects (Details are given in Spot Guidelines).This is in view of the reduced syllabus and number of questions in question paper. |
| **13** | Ensure that you do not make the following common types of errors committed by the Examiner in the past :-<br>● Answers marked as correct, but marks not awarded. (Ensure that the right tick mark is correctly and clearly indicated. It should merely be a line. Same is with the X for incorrect answer.)<br>● Half or a part of answer marked correct and the rest as wrong, but no marks awarded. |
| **14** | While evaluating the answer books if the answer is found to be totally incorrect, it should be marked as cross (X) and awarded zero (0) Marks. |
| **15** | The Examiners should acquaint themselves with the guidelines given in the "**Guidelines for Spot Evaluation**" before starting the actual evaluation. |
| **16** | The candidates are entitled to obtain photocopy of the Answer Book on request on payment of the prescribed processing fee. All Examiners/Additional Head Examiners/Head Examiners are once again reminded that they must ensure that evaluation is carried out strictly as per value points for each answer as given in the Marking Scheme. |
| **17** | **If a candidate attempts both alternatives/options in a question where only one option/ alternative is required to be attempted, the Evaluator shall award marks in both the options. The system will take the higher of two scores and disregard the other response.** |
| **18** | **In a question having two options/alternatives, if a candidate has attempted only one, then the evaluator shall mark "NA" (Not attempted) against the option that has not been attempted by the candidate.** |

**CENTRAL BOARD OF SECONDARY EDUCATION**
**Senior School Certificate Examination -2026**
**MARKING SCHEME**
**KANNADA ( Subject Code – 115) CLASS 12**
**Question Paper Code : 15**

**TOTAL MARKS : 80**

## SECTION – A

**(ವಾಚನ ಮತ್ತು ಗ್ರಹಿಕಾ ಕೌಶಲ : 10 ಅಂಕಗಳು)**

| 1. ಕೆಳಗಿನ ಗದ್ಯಭಾಗ ಓದಿ, ಕೊಟ್ಟಿರುವ ಬಹು ಆಯ್ಕೆಯ ಪ್ರಶ್ನೆಗಳಿಗೆ ಉತ್ತರಿಸಿ. | | | 5X1 =5 |
|---|---|---|---|
| | I | A) ಮೇಲಿನ ಎರಡೂ ಹೇಳಿಕೆಗಳು ಸರಿ | 1 |
| | II | D) ಅದಕ್ಕೆ ಬೇಕಾದ ವಾತಾವರಣವನ್ನು ಸೃಷ್ಟಿಸಬೇಕು | 1 |
| | III | C) ಫ್ರಾನ್ಸ್ | 1 |
| | IV | C) ಗ್ಯಾಜೆಟ್ ಲೋಕದಲ್ಲಿ | 1 |
| | V | B) ಸಾಮಾಜಿಕ ಜಾಲತಾಣಗಳನ್ನು | 1 |

| 2. ಕೆಳಗಿನ ಗದ್ಯಭಾಗ ಓದಿ, ಕೊಟ್ಟಿರುವ ಬಹು ಆಯ್ಕೆಯ ಪ್ರಶ್ನೆಗಳಿಗೆ ಉತ್ತರಿಸಿ. | | | 5X1 =5 |
|---|---|---|---|
| | I | D) ಮೇಲಿನ ಎರಡೂ ಹೇಳಿಕೆಗಳು ತಪ್ಪು | 1 |
| | II | B) ಮನಸ್ಸು | 1 |
| | III | C) ಧ್ಯಾನವೂ | 1 |
| | IV | A) ಮನಸ್ಸನ್ನು ಹದಗೊಳಿಸುವ | 1 |
| | V | B) ೩ | 1 |

## SECTION – B

**(ಅನ್ವಯಿಕ ವ್ಯಾಕರಣ – 16 ಅಂಕಗಳು)**

| 3. ಕೆಳಗೆ ವ್ಯಾಕರಣಾಂಶಗಳ ಬಹು ಆಯ್ಕೆಯ 10 ಪ್ರಶ್ನೆಗಳಿವೆ. ಎಲ್ಲ ಪ್ರಶ್ನೆಗಳಿಗೆ ಉತ್ತರಿಸಿ. | | | 10X1=10 |
|---|---|---|---|
| | I | B) ಲೋಪಸಂಧಿ | 1 |
| | II | D) ದ್ವಿಗು ಸಮಾಸ | 1 |
| | III | C) ಹಾವಿಗೆ ಏಕೆ? | 1 |
| | IV | B) ರಾಜ್ಯಗಳ ಸಂಬಂಧದಲ್ಲಿ ಮುಖ್ಯ ವಿಷಯವಾಗುವುದು | 1 |
| | V | C) ಘೋಷಿಸು | 1 |
| | VI | B) ಬಂಧು + ಏತಕೆ | 1 |
| | VII | C) ಚತುರ್ಥಿ | 1 |
| | VIII | D) ಯೋಗಿ | 1 |
| | IX | B) ಕಾಡು, ಅರಣ್ಯ | 1 |
| | X | A) ತಿಳಿ - ಶತ್ರು | 1 |

4. ಕೆಳಗಿನ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಯಂತೆ ಉತ್ತರಿಸಿ.

<table>
<tr><td>I</td><td>ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಂಗಡಿಸಿ, ಛಂದಸ್ಸನ್ನು ಹೆಸರಿಸಿ.</td><td>2</td></tr>
<tr><td></td><td>
<table>
<tr><td>ನ</td><td>ಜ</td><td>ಭ</td><td>ಜ</td><td>ಜ</td><td>ಜ</td><td>ರ</td></tr>
<tr><td>U U U</td><td>U - U</td><td>- U U</td><td>U - U</td><td>U - U</td><td>U - U</td><td>- U -</td></tr>
<tr><td>ಗು ಣ ಪ</td><td>ರಿ ಪಾ ಲ</td><td>ನಾ ರ್ಥ ಮೆ</td><td>ನ ಗಂ ಬ</td><td>ಗೆ ದೋ ರಿ</td><td>ದ ಳಿ ಲ್ಲ</td><td>ದಿ ವ್ಯ ಭೂ</td></tr>
</table>
<br>ಇದು ಚಂಪಕಮಾಲಾ ವೃತ್ತ</td><td>1<br>1</td></tr>
<tr><td>II</td><td>ಕೆಳಗಿನ ಯಾವುದಾದರೊಂದು ಗಾದೆ ಮಾತನ್ನು ವಿಸ್ತರಿಸಿ ಬರೆಯಿರಿ.</td><td>1X2 =2</td></tr>
<tr><td></td><td>(I) “ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ”<br><br>‘ವೇದ ಸುಳ್ಳಾದರೂ ಗಾದೆ ಸುಳ್ಳಾಗದು’ ಎಂಬ ಮಾತಿದೆ. ಇದು ನಮ್ಮ ಹಿರಿಯರು ಹೇಳಿದ ನುಡಿಮುತ್ತುಗಳು. ಜೀವನದ ಸಾರ ಸರ್ವಸ್ವವನ್ನು ಈ ಗಾದೆಗಳು ಹೇಳುತ್ತವೆ. ಇದರಲ್ಲಿ ‘ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ’ ಎಂಬುದು ಅರ್ಥಗರ್ಭಿತವಾದ ಗಾದೆ ಮಾತಾಗಿದೆ.<br>ಕುಂಬಾರನು ಮಡಿಕೆ ಮಾಡಲು ಶ್ರಮವಹಿಸಿ ಹಲವು ದಿನಗಳನ್ನು ತೆಗೆದುಕೊಳ್ಳುತ್ತಾನೆ. ಆದರೆ ಅದನ್ನು ಒಡೆಯಲು ಒಂದು ಕ್ಷಣ ಸಾಕು. ಹಾಗೆಯೇ ನಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಹಲವು ವರ್ಷಗಳ ಶ್ರಮ ಬೇಕು. ಆದರೆ ಅದನ್ನು ಹಾಳು ಮಾಡಲು ಒಂದು ಕ್ಷಣ ಸಾಕು.<br>ಇದೇ ಅರ್ಥವನ್ನು ಕೊಡುವ ಮತ್ತೊಂದು ಗಾದೆ ಕಟ್ಟುವುದು ಕಠಿಣ ಕೆಡಹುವುದು ಸುಲಭ/ ಕಟ್ಟಲು ನೂರು ವರುಷ, ಕೆಡವಲು ಮೂರು ವರುಷ.<br><br>(II) “ಹೊಳೆಯುವುದೆಲ್ಲ ಚಿನ್ನವಲ್ಲ”<br><br>‘ವೇದ ಸುಳ್ಳಾದರೂ ಗಾದೆ ಸುಳ್ಳಾಗದು’ ಎಂಬ ಮಾತಿದೆ. ಇದು ನಮ್ಮ ಹಿರಿಯರು ಹೇಳಿದ ನುಡಿಮುತ್ತುಗಳು. ಜೀವನದ ಸಾರ ಸರ್ವಸ್ವವನ್ನು ಈ ಗಾದೆಗಳು ಹೇಳುತ್ತವೆ. ಇದರಲ್ಲಿ ‘ಹೊಳೆಯುವುದೆಲ್ಲ ಚಿನ್ನವಲ್ಲ’ಎಂಬುದು ಅರ್ಥಗರ್ಭಿತವಾದ ಗಾದೆ ಮಾತಾಗಿದೆ.<br>ಯಾವುದೇ ವಸ್ತುವಿನ ಅಥವಾ ವ್ಯಕ್ತಿಯ ಗುಣವನ್ನು ಮೇಲಿನ ಆಕಾರ ನೋಡಿ ನಿರ್ಧರಿಸಬಾರದು. ಕೆಲವು ಲೋಹಗಳು, ವಸ್ತುಗಳು ಚಿನ್ನದಂತೆ ಕಂಡರೂ ಅದು ನಿಜವಾದ ಚಿನ್ನವಾಗಿರುವುದಿಲ್ಲ. ಅದೇ ರೀತಿ ಕೆಲವು ವ್ಯಕ್ತಿಗಳು ವೇಷ ಭೂಷಣಗಳಿಂದ, ಸೌಂದರ್ಯದಿಂದ ಆಕರ್ಷಿಸಿದರೂ ಅವರ ಒಳಗೆ ಒಳ್ಳೆಯ ಗುಣಗಳು ಇವೆ ಎಂದು ನಿರ್ಧರಿಸಲು ಸಾಧ್ಯವಿಲ್ಲ. ಪ್ರತಿಯೊಂದನ್ನು ಸೂಕ್ಷ್ಮವಾಗಿ ಗಮನಿಸಿ, ಯೋಚಿಸಿ ನಿರ್ಧರಿಸಬೇಕು.</td><td>1<br>1<br>1<br>1</td></tr>
<tr><td>III</td><td>ಕೆಳಗಿನ ವಾಕ್ಯವನ್ನು ಕರ್ಮಣಿ ವಾಕ್ಯವನ್ನಾಗಿ ಬದಲಿಸಿ.</td><td rowspan="2">1</td></tr>
<tr><td></td><td>ಸಂತ್ರಸ್ತರ ಅಹವಾಲುಗಳು ಉಸ್ತುವಾರಿ ಸಚಿವರಿಂದ ಸ್ವೀಕರಿಸಲ್ಪಟ್ಟವು.<br>ಉಸ್ತುವಾರಿ ಸಚಿವರಿಂದ ಸಂತ್ರಸ್ತರ ಅಹವಾಲುಗಳು ಸ್ವೀಕರಿಸಲ್ಪಟ್ಟವು. (ಇದರಲ್ಲಿ ಯಾವ ಉತ್ತರ ಬರೆದರೂ ಅಂಕಗಳನ್ನು ನೀಡುವುದು)</td></tr>
<tr><td>IV</td><td>ಕೆಳಗಿನ ವಾಕ್ಯವನ್ನು ಪ್ರಶ್ನಾರ್ಥಕ ವಾಕ್ಯವನ್ನಾಗಿ ಪರಿವರ್ತಿಸಿ.</td><td>1</td></tr>
<tr><td></td><td>ಯೋಧರು ಮತ್ತು ಮಾಜಿ ಸೈನಿಕರ ಕಲ್ಯಾಣಕ್ಕೆ ಸರ್ಕಾರ ಬದ್ಧವಾಗಿದೆಯೆ?</td><td>1</td></tr>
</table>

## SECTION – C

(ವಾಚನ ಮತ್ತು ಗ್ರಹಿಕಾ ಕೌಶಲ : – 14 ಅಂಕಗಳು)

| 5. ಕೆಳಗಿನ ಪದ್ಯಭಾಗ ಓದಿ, ಕೊಟ್ಟಿರುವ ಬಹು ಆಯ್ಕೆಯ ಪ್ರಶ್ನೆಗಳಿಗೆ ಉತ್ತರಿಸಿ. | | | 5X1 =5 |
|---|---|---|---|
| 1 | I | A) ಬಳಲಿ ಬಂದವರಿಗೆ | 1 |
| | II | B) ಊರಹಂದಿ | 1 |
| | III | C) ಘೋರಪಾಪಿಗಳು | 1 |
| | IV | A) ವಿಷದಂತೆ | 1 |
| | V | A) ಮೂಲಾಗ್ರ ಪರಿಯಂತ | 1 |

| 6. ಕೆಳಗಿನ ಗದ್ಯಭಾಗ ಓದಿ, ಕೊಟ್ಟಿರುವ ಬಹು ಆಯ್ಕೆಯ ಪ್ರಶ್ನೆಗಳಿಗೆ ಉತ್ತರಿಸಿ. | | | 5X1 =5 |
|---|---|---|---|
| | I | B) ಅಯ್ಯೋ ಒಮ್ಮೆ ಬಂದ ಮೇಲೆ ಆಗ್ತಾನೇ ಇರುತ್ತೆ, ಏನು ಮಾಡೋಕಾಗುತ್ತೆ? | 1 |
| | II | C) ಹಾಲಿನ ಪದಾರ್ಥಗಳನ್ನು ಜಾಸ್ತಿ ಸೇವಿಸಬಾರದು | 1 |
| | III | A) ೮ ಮಿ. ಮೀ. | 1 |
| | IV | C) ಹೆಚ್ಚು ನೀರು ಕುಡಿಯುವುದರಿಂದ | 1 |
| | V | D) ಎಳನೀರು ತರಲು | 1 |

| 7. ಕೆಳಗಿನ ಗದ್ಯಭಾಗ ಓದಿ, ಕೊಟ್ಟಿರುವ ಬಹು ಆಯ್ಕೆಯ ಪ್ರಶ್ನೆಗಳಿಗೆ ಉತ್ತರಿಸಿ. | | | 4X1 =4 |
|---|---|---|---|
| | I | B) ಎಲೆಕ್ಟ್ರಿಕ್ ಲೈನಿಗೆ | 1 |
| | II | A) ಹಿತ್ತಾಳೆ ಆಭರಣಗಳಿಂದ | 1 |
| | III | D) ಗೂಳೂರು ಮಠದ ಜಗದ್ಗುರುಗಳು | 1 |
| | IV | A) ಕಾಡಪ್ಪಶೆಟ್ಟರು | 1 |

## SECTION – D

(ಪಠ್ಯಗಳ ಅಧ್ಯಯನ, ಕವಿ ಪರಿಚಯ ಮತ್ತು ಸೃಜನಾತ್ಮಕ ಬರೆವಣಿಗೆ: 40 ಅಂಕಗಳು)

**೮. ಎರಡು – ಮೂರು ವಾಕ್ಯಗಳಲ್ಲಿ ಉತ್ತರಿಸಿ. 3X2 =6**

| | | |
|---|---|---|
| I | **ಕಲಾಂ ಅವರ ದೃಷ್ಟಿಯಲ್ಲಿ ಕನಸುಗಳು ಏನಾಗುತ್ತವೆ?** | 2 |
| | ಕಲಾಂ ಅವರ ದೃಷ್ಟಿಯಲ್ಲಿ ಕನಸುಗಳು ಆಲೋಚನೆಗಳಾಗುತ್ತವೆ. ಆಲೋಚನೆಗಳು ಸೃಜನಾತ್ಮಕ ಕ್ರಿಯೆಗಳಾಗಿ ಪರಿವರ್ತನೆಗೊಳ್ಳುತ್ತವೆ ಎಂದು ಹೇಳಿದರು. | 1<br>1/2<br>1/2 |
| II | **ಶುಚಿ ಮತ್ತು ಸ್ವಾದಗಳನ್ನು ಕುರಿತು ಸೋಮನಾಥನ ಅಭಿಪ್ರಾಯವೇನು?** | 2 |
| | ಶುಚಿ ಎಂಬುದು ಅಂತರಂಗಕ್ಕೆ ಸಂಬಂಧಿಸಿದ್ದು. ಇದು ಬಾಹ್ಯರೂಪಕ್ಕೆ ಅಲ್ಲ. ಶರೀರದ ಒಳಗೆ ಕೊಳೆಯನ್ನು ತುಂಬಿಕೊಂಡು ಬಾಹ್ಯ ಶರೀರವನ್ನು ತೊಳೆದರೆ ಅದು ಶುಚಿಯಾಗಲಾರದು. ಬೇವಿನ ಫಲವನ್ನು ಬೆಲ್ಲದ ನೀರಿನಲ್ಲಿ ಅದ್ದಿದರೂ ಸಹ ಅದರ ಕಹಿಯ ಗುಣವನ್ನು ಬಿಡುವುದಿಲ್ಲ. ಬಾಹ್ಯ ಶುಚಿತ್ವಕ್ಕಿಂತ ಅಂತರಂಗದ ಶುಚಿ ಮುಖ್ಯವಾದುದ್ದು. ನಿರ್ಮಲ ಚಿತ್ತವೇ ನಿಜವಾದ ಮಡಿ. | 1<br>1/2<br>1/2 |

| | | |
|---|---|---|
| III | **ಅರಣ್ಯ ಇಲಾಖೆಯವರು ನಾಗರಾಜನನ್ನು ಕುರಿತು ಏನೆಂದು ಜಾಹೀರಾತು ನೀಡಿದರು?** | 2 |
| | ಅರಣ್ಯ ಇಲಾಖೆಯವರು ಪತ್ರಿಕೆಗಳಲ್ಲಿ ನಾಗರಾಜನ ಫೋಟೋ ಕೊಟ್ಟು ಮನೆಯವರು, ಮೇಲಾಧಿಕಾರಿಗಳು ಹಾಗೂ ಊರಿನ ಜನರೆಲ್ಲ ನಿನ್ನದೇ ನಿರೀಕ್ಷೆಯಲ್ಲಿದ್ದಾರೆಂದೂ, ನಿನ್ನ ವಿರುದ್ಧ ಯಾವುದೇ ಕ್ರಮ ಅಥವಾ ಷೋಕಾಸ್ ನೋಟೀಸ್ ಅಥವಾ ತನಿಖೆ ನಡೆಸುವುದಿಲ್ಲವೆಂದೂ, ಈ ಮನವಿ ನೋಡಿದ ಕೂಡಲೇ ಎಲ್ಲಿದ್ದರೂ ಹಿಂದಿರುಗಿ ಬರತಕ್ಕದ್ದೆಂದೂ ಜಾಹೀರಾತು ಕೊಟ್ಟರು. | 1<br>1/2<br>1/2 |

**೯. ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ.** **3X3 =9**

| | | |
|---|---|---|
| I | **"ಕನ್ನಡಿಗರು ಮೊದಲು ಕನ್ನಡಿಗರಾಗಬೇಕು"** | 3 |
| | ಪ್ರಸ್ತುತ ವಾಕ್ಯವನ್ನು 'ಡಾ॥ ಹಾ. ಮಾ. ನಾಯಕ ಅವರು ಬರೆದ 'ಕನ್ನಡವನ್ನು ಕಟ್ಟುವ ಕೆಲಸ' ಎಂಬ ಗದ್ಯ ಭಾಗದಿಂದ ಆಯ್ದುಕೊಳ್ಳಲಾಗಿದೆ.<br>**ಸಂದರ್ಭ –** ಲೇಖಕರು ನಿರಭಿಮಾನ ಹೊಂದಿರುವ ಕನ್ನಡಿಗರಿಗೆ ಈ ಮಾತನ್ನು ಹೇಳುತ್ತಾರೆ. ಪ್ರತಿಯೊಬ್ಬ ಕನ್ನಡಿಗನು ಪ್ರತಿಯೊಂದು ಅಂಗುಲದಲ್ಲಿಯೂ ಕನ್ನಡಿಗನಾದಾಗ ಮಾತ್ರ ಅನೇಕ ಸಮಸ್ಯೆಗಳಿಗೆ ಪರಿಹಾರ ದೊರಕುವುದೆಂದು ಹೇಳುವ ಹಾ. ಮಾ. ನಾ. ಕನ್ನಡ ಹೇಳುವುದಕ್ಕೆ ಮಾತ್ರವಲ್ಲ ಅನುಸರಿಸುವುದಕ್ಕೂ ಕನ್ನಡ ಎಂಬುದನ್ನು ಜನ ಮೊದಲು ಅರಿಯಬೇಕೆಂದಿದ್ದಾರೆ. ನಮ್ಮ ಮಕ್ಕಳು ಓದುವ ಶಾಲೆ, ನಾವು ಓದುವ ಪತ್ರಿಕೆ, ನಾವು ನೋಡುವ ಸಿನಿಮಾ, ನಮ್ಮ ಮನೆಯ ಬೋರ್ಡು, ನಮ್ಮ ಲೆಟರ್ ಹೆಡ್‌ಗಳು, ಬ್ಯಾಂಕಿಗೆ ಬರೆಯುವ ಚೆಕ್ಕುಗಳು, ಕಾಗದ ಪತ್ರಗಳು – ಎಲ್ಲದರಲ್ಲಿಯೂ ಕನ್ನಡಕ್ಕೆ ಆದ್ಯತೆ ಸಲ್ಲಬೇಕು. ಹೀಗೆ ಬಳಕೆಯಲ್ಲಿ ಕನ್ನಡವನ್ನು ತಂದಾಗ ನಾವು ನಿಜವಾದ ಕನ್ನಡದವರಾಗುತ್ತೇವೆ. ಇಲ್ಲವೆ ಬರಿ ಹೆಸರಿಗಷ್ಟೆ ಕನ್ನಡಿಗರಾಗಿರುತ್ತೇವೆ ಎಂದು ಲೇಖಕರು ಹೇಳುತ್ತಾರೆ.<br>**ಸ್ವಾರಸ್ಯ –** ಕನ್ನಡಿಗರು ತಮ್ಮ ಮನೋಸ್ಥಿತಿಯನ್ನು ಹೇಗೆ ಸರಿಪಡಿಸಿಕೊಂಡು ಕನ್ನಡಿಗರಾಗಬೇಕೆಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. | 1<br>1.1/2<br>1/2 |
| II | **"ಹಗೆಗಳನು ಹಿಂಡಿದನು ಮನದೊಳಗೆ"** | 3 |
| | ಪ್ರಸ್ತುತ ಈ ಸಾಲನ್ನು ಕುಮಾರವ್ಯಾಸನು ರಚಿಸಿರುವ 'ಇನ್ನು ಹುಟ್ಟದೆಯಿರಲಿ ನಾರಿಯರೆನ್ನವೊಲು' ಎಂಬ ಕಾವ್ಯ ಭಾಗದಿಂದ ಆಯ್ದು ಕೊಳ್ಳಲಾಗಿದೆ.<br>**ಸಂದರ್ಭ –** ಈ ಮಾತನ್ನು ಕವಿಯು ಭೀಮನ ಪರಿಸ್ಥಿತಿಯನ್ನು ಕಂಡು ಓದುಗರಿಗೆ ಹೇಳುತ್ತಾನೆ. ದ್ರೌಪದಿಯು ತನ್ನ ಅಳಲನ್ನು ಭೀಮನಲ್ಲಿ ಹೇಳಿಕೊಳ್ಳುತ್ತಾಳೆ. ಭೀಮನಿಂದ ಯಾವುದೇ ರೀತಿಯ ರಕ್ಷಣೆಯ ಭರವಸೆಗಳು ದೊರೆಯದಿದ್ದಾಗ ಸಿಟ್ಟಿನಿಂದ ಭೀಮನನ್ನು ನಿಂದಿಸುತ್ತಾಳೆ. ಆಗ ಭೀಮನು ತನ್ನ ಕಣ್ಣುಗಳಲ್ಲಿ ನೀರನ್ನು ತುಂಬಿಕೊಳ್ಳುತ್ತಾನೆ. ಅವನ ಮನಸ್ಸು ಕರಗಿ ಹೋಗುತ್ತದೆ. ಕೀಚಕನ ಬಗ್ಗೆ ರೋಷ ಹೆಚ್ಚುತ್ತದೆ. ಭೀಮನು ಹಳೆಯ ನೆನಪುಗಳನ್ನು ತನ್ನ ಮನಸ್ಸಿನಲ್ಲಿ ನೆನೆಯುತ್ತಾ, ನೊಂದುಕೊಳ್ಳುತ್ತಾ, ವೈರಿಗಳನ್ನು ನಾಶ ಮಾಡಲು ಮನದಲ್ಲಿ ನಿರ್ಧರಿಸುತ್ತಾನೆ.<br>**ಸ್ವಾರಸ್ಯ –** ಇಲ್ಲಿ ದ್ರೌಪದಿಯ ಅಸಹಾಯಕತೆಯನ್ನು, ಭೀಮನ ಆಕ್ರೋಶವನ್ನು ತಿಳಿಯಬಹುದಾಗಿದೆ. | 1<br>1.1/2<br>1/2 |

**ಅಥವಾ**

| | | |
|---|---|---|
| | **"ಮಾತೇ ಮರೆತು ಹೋಗಿದೆ ಕಣೇ"** | 3 |
| | ಪ್ರಸ್ತುತ ಈ ಸಾಲನ್ನು 'ಲಲಿತಾ ಸಿದ್ಧಬಸವಯ್ಯ' ಅವರು ಬರೆದಿರುವ 'ಒಂದು ಹೂ ಹೆಚ್ಚಿಗೆ ಇಡುತೀನಿ' ಎನ್ನುವ ಎಂಬ ಕವನದಿಂದ ಆಯ್ದುಕೊಳ್ಳಲಾಗಿದೆ.<br>**ಸಂದರ್ಭ –** ಈ ಮಾತನ್ನು ಅಸ್ಸಾಮಿನಲ್ಲಿರುವ ಮುದುಕನು ಕರ್ನಾಟಕದಲ್ಲಿರುವ ಮುದುಕಿಗೆ ಹೇಳುತ್ತಾನೆ. ಅಸ್ಸಾಮಿನಲ್ಲಿ ಚಿಕ್ಕ ಮಗನ ಬಳಿ ಮುದುಕ ಇರುತ್ತಾನೆ. ಕರ್ನಾಟಕದಲ್ಲಿ ದೊಡ್ಡ ಮಗನ ಬಳಿ ಮುದುಕಿ ಇರುತ್ತಾಳೆ. ಕರ್ನಾಟಕದಲ್ಲಿ ಕನ್ನಡ ಮಾತನಾಡುವವರು ಹೆಚ್ಚಾಗಿರುವುದರಿಂದ ಮುದುಕಿಗೆ ಸಮಯ ಕಳೆಯಲು ತೊಂದರೆಯಾಗುವುದಿಲ್ಲ. ಆದರೆ ಆಸ್ಸಾಮಿನಲ್ಲಿ ಮಗ ಸೊಸೆ ಇಬ್ಬರೂ ಬೆಳಗ್ಗೆ ಆಫೀಸಿಗೆ ಹೋದರೆ ಅವರು ಬರುವುದು ಹೊತ್ತು ಮುಳುಗಿದ ಮೇಲೆ. ಮನೆಯಲ್ಲಿ ಮುದುಕ ಒಬ್ಬನೇ. ಮುದುಕನಿಗೆ ಅಕ್ಕ ಪಕ್ಕದವರೊಂದಿಗೆ ಮಾತನಾಡಲು ಆಸ್ಸಾಮಿ ಭಾಷೆ ಬರುವುದಿಲ್ಲ. ಏನೇ ಮಾತನಾಡುವುದಿದ್ದರೂ ಫೋನಿನಲ್ಲಿ ತನ್ನ ಹೆಂಡತಿಯೊಂದಿಗೆ ಮಾತನಾಡಲು ಕಾಯಬೇಕು. ಹೀಗಾಗಿ ನನಗೆ ಮಾತೇ ಮರೆತು ಹೋಗಿದೆ ಕಣೇ ಎಂದು ಹೇಳುತ್ತಾನೆ.<br>ಸ್ವಾರಸ್ಯ – ಇಲ್ಲಿ ಮುದುಕ ಮುದುಕಿಯರ ಅದಮ್ಯ ಪ್ರೀತಿ, ಅಸಹಾಯಕತೆ, ತಳಮಳವನ್ನು ತಿಳಿಯಬಹುದಾಗಿದೆ. | 1<br>1.1/2<br>1/2 |

| | | |
|---|---|---|
| III | **"ಮುನ್ಸಿಪಾಲ್ ಪ್ರೆಸಿಡೆಂಟರಾಗಿ ಊರನ್ನು ಸ್ವಚ್ಛವಾಗಿಡುವುದು ನಿಮ್ಮ ಕರ್ತವ್ಯ"** | 3 |
| | ಪ್ರಸ್ತುತ ವಾಕ್ಯವನ್ನು ಶ್ರೀಯುತ 'ಕೆ. ಪಿ. ಪೂರ್ಣಚಂದ್ರ ತೇಜಸ್ವಿಯವರ 'ಕಿರಗೂರಿನ ಗಯ್ಯಾಳಿಗಳು' ಕಥಾ ಸಂಕಲನದಿಂದ ಆಯ್ದ 'ಕೃಷ್ಣೇಗೌಡನ ಆನೆ' ಎಂಬ ನೀಳ್ಗತೆಯಿಂದ ಆಯ್ದುಕೊಳ್ಳಲಾಗಿದೆ.<br>**ಸಂದರ್ಭ –** ಲೇಖಕರ ಎಲ್ಲಾ ಪ್ರಶ್ನೆಗಳಿಗೂ ಮುನ್ಸಿಪಾಲ್ ಪ್ರೆಸಿಡೆಂಟ್ ಖಾನ್ ಸಾಹೇಬರ ಬಳಿ ರೆಡಿಮೇಡ್ ಉತ್ತರಗಳು ಸಿದ್ಧವಾಗಿದ್ದವು. ಆದರೂ ಲೇಖಕರು "ಖಾನ್ ಸಾಹೇಬರೆ ನೀವು ಸಣ್ಣ ಪುಟ್ಟ ವಿಷಯ ಎಲ್ಲಾ ತಗೊಂಡು ಬಂದು ಧರ್ಮಕ್ಕೆ ಗಂಟಾಕಿ ಸುಮ್ಮನೆ ಕಾಂಪ್ಲಿಕೇಟ್ ಮಾಡುತ್ತಿದ್ದೀರಿ. ಮುನ್ಸಿಪಾಲ್ ಪ್ರೆಸಿಡೆಂಟಾಗಿ ಊರನ್ನು ಸ್ವಚ್ಛವಾಗಿಡುವುದು ನಿಮ್ಮ ಕರ್ತವ್ಯ. ಅದು ಬಿಟ್ಟು ಅದರಿಂದ ಬರುವ ರೋಗಗಳಿಗೆ ಉಚಿತ ಔಷಧಿ ಹಂಚುತ್ತೀನಿ ಎನ್ನುತ್ತೀರಲ್ಲಾ" ಎಂದು ಲೇಖಕರು ಕೇಳುವ ಸಂದರ್ಭ ಇದಾಗಿದೆ.<br>**ಸ್ವಾರಸ್ಯ –** ಜನರ ಕಷ್ಟಗಳಿಗೆ ಸ್ಪಂದಿಸದೆ ಹಲವು ಕಾರಣಗಳನ್ನು ನೀಡಿ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುತ್ತಿರುವ ಅಧಿಕಾರಿಗಳ ಮನೋಸ್ಥಿತಿಯನ್ನು ಇಲ್ಲಿ ತಿಳಿಯಬಹುದು. | 1<br>1.1/2<br>1/2 |

10. ಕೆಳಗಿನ ಕವಿ /ಲೇಖಕರಲ್ಲಿ ಯಾರಾದರೂ ಒಬ್ಬರ ಬಗ್ಗೆ ಆರೇಳು ವಾಕ್ಯಗಳಲ್ಲಿ ಬರೆಯಿರಿ. **1X3 =3**

| | | |
|---|---|---|
| I | **ಬಸವಣ್ಣ** | 3 |
| | ಕಾಲ: **ಸುಮಾರು ಹನ್ನೆರಡನೆಯ ಶತಮಾನದಲ್ಲಿದ್ದ ಪ್ರಸಿದ್ಧ ವಚನಕಾರರು.**<br>**ಸ್ಥಳ** -ಬಿಜಾಪುರ ಜಿಲ್ಲೆಯ ಬಾಗೇವಾಡಿ<br>ಮಾದಿರಾಜ ಮತ್ತು ಮಾದಾಂಬೆ ತಂದೆ ತಾಯಿ. ಬಿಜ್ಜಳನ ಆಸ್ಥಾನದಲ್ಲಿ ಕೋಶಾಧ್ಯಕ್ಷ. ಕೂಡಲಸಂಗಮದೇವ ಅಂಕಿತನಾಮ. ಭಕ್ತಿ ಭಂಡಾರಿ ಎಂದು ಪ್ರಸಿದ್ಧರಾಗಿದ್ದಾರೆ.<br>ಭಕ್ತಿ, ಜ್ಞಾನ, ಮಾನವೀಯತೆ ಹಾಗೂ ವೈರಾಗ್ಯ ಪರವಾದ ಬಸವಣ್ಣನವರ ವಚನಗಳು ಸುಲಭವಾದ, ಲಲಿತವಾದ, ಸರಳ ಭಾಷೆಯಿಂದ ಕೂಡಿವೆ. ಜಾತಿ, ಮತ, ಕುಲ, ಲಿಂಗ ಭೇದಗಳಿಂದ ಹೊರತಾದ ಸಮಾಜ ನಿರ್ಮಿತಿ ಅವರ ಪ್ರಮುಖ ಗುರಿ. ಜನರ ಅಜ್ಞಾನ, ಕಂದಾಚಾರ, ಜಾತಿ ಸಂಕರಗಳನ್ನು ಕುರಿತು ಅವರ ವಚನಗಳು ಚಿಂತಿಸಿವೆ. | 1/2<br>1/2<br>1/2<br>1/2<br>1/2<br>1/2 |

| | | |
|---|---|---|
| II | **ಹಾ. ಮಾ. ನಾಯಕ** | 3 |
| | **ಡಾ॥ ಹಾರೋಗದ್ದೆ ಮಾನಪ್ಪ ನಾಯಕ . ಹಾಮಾನಾ ಎಂದು ಪ್ರಸಿದ್ಧ.**<br>ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಹಾರೋಗದ್ದೆಯಲ್ಲಿ ಜನನ. ಕಾಲ 1931 -2001. ಮೈಸೂರು ವಿ.ವಿ.ಯ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರು. ಗುಲಬರ್ಗಾ ವಿ.ವಿ.ಯ ಕುಲಪತಿಗಳಾಗಿ ಸೇವೆ. ಕನ್ನಡದ ಹಲವು ಪತ್ರಿಕೆಗಳಲ್ಲಿ ಖ್ಯಾತ ಅಂಕಣಕಾರರೆನಿಸಿಕೊಂಡವರು. ತಮ್ಮ ಸಂಪ್ರತಿ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರ ಪಡೆಯುವುದರ ಮೂಲಕ ದೇಶದಲ್ಲೇ ಅಂಕಣ ಬರಹಕ್ಕೆ ಮಾನ್ಯತೆ ತಂದುಕೊಟ್ಟರು.<br>1985 ರಲ್ಲಿ ಬೀದರಿನಲ್ಲಿ ನಡೆದ 57 ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.<br>**ಕೃತಿಗಳು** - ಬಾಳ್ನೋಟಗಳು, ಸಂಪ್ರತಿ, ಸಲ್ಲಾಪ, ಸಂಭ್ರಮ, ಸೂಲಂಗಿ, ಸಂಪಣ, ಭಾರತದ ಧರ್ಮ, ರವೀಂದ್ರನಾಥ ಠಾಕೂರ್, ಸಂಗತಿ, ನಮ್ಮ ಮನೆಯ ದೀಪ ಮುಂತಾದ ಕೃತಿಗಳನ್ನು ಬರೆದಿದ್ದಾರೆ.<br>**ಪ್ರಶಸ್ತಿಗಳು** – ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಐಬಿಎಚ್ ಪ್ರಶಸ್ತಿ, ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ. | 1/2<br>1/2<br>1/2<br>1/2<br>1/2<br>1/2 |

**ಅಥವಾ**

| III | ಪುರಂದರದಾಸ | 3 |
|---|---|---|
| | ದಾಸರೆಂದರೆ ಪುರಂದರದಾಸರಯ್ಯ ಎಂದು ಗುರುಗಳಿಂದಲೇ ಹೊಗಳಿಸಿಕೊಂಡವರು.<br>**ಕಾಲ** -ಕ್ರಿ ಶ ಸುಮಾರು 1484<br>**ಪೂರ್ವದ ಹೆಸರು ಶ್ರೀನಿವಾಸನಾಯಕ. ವೃತ್ತಿ ಮುತ್ತು ರತ್ನಗಳ ವ್ಯಾಪಾರಿ. ಪುರಂದರ ವಿಠಲ ಎನ್ನುವುದು ಅಂಕಿತನಾಮ. ಗುರುಗಳು ವ್ಯಾಸರಾಯರು,**<br>**ರಚನೆ – ಕೀರ್ತನೆಗಳು, ಪದ, ಸುಳಾದಿ, ಉಗಾಭೋಗ. ಲಕ್ಷಾಂತರ ಕೀರ್ತನೆ ರಚನೆ. ದೊರಕಿದ್ದು ಸುಮಾರು ೮೦೦.**<br>ಪಕ್ವವಾದ ಜೀವನಾನುಭವ, ಸಮಾಜದ ಹಿತ, ಅಧ್ಯಾತ್ಮ, ಭಕ್ತಿ, ಡಾಂಬಿಕತೆಯ ವಿಡಂಬನೆ ಇವರ ಕೀರ್ತನೆಯಲ್ಲಿ ಕಾಣಬಹುದು.<br>ಕರ್ನಾಟಕ ಸಂಗೀತ ಪಿತಾಮಹ ಎಂಬ ಹೆಗ್ಗಳಿಕೆ ಇವರಿಗಿದೆ. | 1/2<br>1/2<br>1/2<br>1/2<br>1/2<br>1/2 |

11. **ಎಂಟು - ಹತ್ತು ವಾಕ್ಯಗಳಲ್ಲಿ ಉತ್ತರಿಸಿ.** **3X4 =12**

| I | **ಚಿನ್ನಮ್ಮ ಮತ್ತೆ ಬೆಳ್ಳಿಲೋಟವನ್ನು ಹೊಳೆಗೆ ಎಸೆಯಲು ಕಾರಣವೇನು? ವಿಶ್ಲೇಷಿಸಿ.** | 4 |
|---|---|---|
| | ➢ ಬೆಳ್ಳಿಲೋಟ ಮಣ್ಣಿನಲ್ಲಿ ದೊರೆತಾಗ ಕುದುಪನಿಗೆ ಅತ್ಯಂತ ಸಂತೋಷ, ಅದನ್ನು ಒಡೆಯನಿಗೆ ಕೊಡಲು ಆಲೋಚನೆ.<br>➢ ಚಿನ್ನಮ್ಮನ ಮನಸ್ಸಿನಲ್ಲಿ ಮೂಡಿದ ಗೊಂದಲ ಬೇರೆ; ತನ್ನ ಕುಟುಂಬದ ಮೇಲೆ ಕಳ್ಳತನದ ಕಿರೀಟ ಹೊರಿಸಿದ ಬೆಳ್ಳಿಲೋಟದ ಮೇಲೆ ವಿಪರೀತ ಕೋಪ; ಲೋಟ ಬೆಳ್ಳಿಯದಾದರೂ ಅದರ ಗುಣ ಮಣ್ಣಿಗಿಂತಲೂ ಕೀಳು. ತನ್ನ ಕುಟುಂಬ ಇದುವರೆಗೆ ಅನುಭವಿಸಿದ ನೋವು, ಉಂಡ ಅವಮಾನ, ಪಟ್ಟ ಪರಿತಾಪಗಳು ಚಿನ್ನಮ್ಮನ ಮನಸ್ಸಿನಲ್ಲಿ ಗೊಂದಲ ಮೂಡಿಸುತ್ತವೆ.<br>➢ ಮೂರು ವರ್ಷಗಳ ಕಾಲ ಪಡಿ ಇಲ್ಲದೆಯೇ ಧಣಿಗಳ ಬಳಿ ಕೆಲಸ ಮಾಡಿದ ಸಂಕಟದ ನೆನಪು; ಮಗನಿಗೆ ನೀಡಿದ ಶಿಕ್ಷೆ, ಈ ಕಾರಣಗಳಿಗಾಗಿ ಪ್ರತಿಭಟನೆಯ ರೂಪದಲ್ಲಿ ಬೆಳ್ಳಿಯ ಲೋಟವನ್ನು ಮತ್ತೆ ನದಿಗೆ ಎಸೆದುಬಿಡುತ್ತಾಳೆ.<br>➢ ಬೆಳ್ಳಿಲೋಟವನ್ನು ಧಣಿಗಳಿಗೆ ಹಿಂದಿರುಗಿಸಿದ್ದರೆ ಕುಟುಂಬ ಆಪಾದನೆಯಿಂದ ಪಾರಾಗಬಹುದಾಗಿತ್ತು. ಆದರೆ ಅದು ಅವಳ ಸಂಕಟ, ಅಪಮಾನ, ಪರಿತಾಪಗಳಿಗೆ ಬೆಲೆಕೊಟ್ಟಂತೆ ಆಗುತ್ತಿರಲಿಲ್ಲ.<br>➢ ಆಪಾದನೆಯಿಂದ ಮುಕ್ತವಾದರೂ ಅವಳ ಮನಸ್ಸಿನ ರೋಷವನ್ನು ಲೋಟ ಎಸೆಯುವ ಮೂಲಕ ತೀರಿಸಿಕೊಂಡಿದ್ದು ಸರಿ ಎನಿಸುತ್ತದೆ. ಇನ್ನು ಮುಂದೆ ತಲೆ ಎತ್ತಿ ನಡೆಯಲು ಅವಕಾಶ; ಅವಳ ಸ್ವಾಭಿಮಾನ ಗೆದ್ದಿತು.<br>( **ಈ ಮೇಲಿನ ಅಂಶಗಳಲ್ಲಿ ಯಾವುದಾದರೂ 4 ರಿಂದ 6 ಅಂಶಗಳನ್ನು ನೀಡಿದರೂ ಪೂರ್ಣ ಅಂಕಗಳನ್ನು ನೀಡುವುದು**) | 1<br>1<br>1/2<br>1/2<br>1/2<br>1/2 |

## ಅಥವಾ

| | | |
|---|---|---|
| | ಮುದ್ದಣ – ಮನೋರಮೆಯರ ಸಂವಾದದ ಸ್ವಾರಸ್ಯ ವಿವರಿಸಿ. | 4 |
| | ➢ ಮುದ್ದಣ ಮನೋರಮೆಯರ ಪ್ರಸಂಗವು ಅತ್ಯಂತ ಸ್ವಾರಸ್ಯಕರ ಪ್ರಸಂಗವೆಂದು ಕನ್ನಡ ಸಾಹಿತ್ಯದಲ್ಲಿ ಪ್ರಸಿದ್ಧವಾಗಿದೆ.<br>➢ ಗಂಡ ಹೆಂಡತಿಯ ನಡುವಿನ ಸರಸ ಸಲ್ಲಾಪ, ಅನ್ಯೋನ್ಯತೆ, ಸಾಹಿತ್ಯಪ್ರೀತಿ, ಭಾಷಾಭಿಮಾನವನ್ನು ತೋರಿದೆ.<br>➢ ಸಾಮಾನ್ಯ ಚಿತ್ರಕ್ಕೆ ಸುವರ್ಣ ಚೌಕಟ್ಟು<br>➢ ಪದ್ಯಂ ವಧ್ಯಂ, ಗದ್ಯಂ ಹೃದ್ಯಂ<br>➢ 'ಕನ್ನಡಂ ಕತ್ತುರಿ'ಯಲ್ತೆ ಎಂಬ ಹೊಗಳಿಕೆ<br>➢ ರಾಮಾಶ್ವಮೇಧದ ಕತೆ<br>➢ ವಿಮರ್ಶಕಿಯಾಗಿ, ಸಹೃದಯ ಸಂಪನ್ನಳಾಗಿಯೂ ಚಿತ್ರಿತವಾಗಿದೆ.<br>➢ ಕನ್ನಡ ಸಂಸ್ಕೃತ ಭಾಷೆಯ ಹದವರಿತ ಶೈಲಿಯ ಕತೆ, ಕರಿಮಣಿ ಸರದಲ್ಲಿ ಕೆಂಪವಳವನ್ನು ಪೋಣಿಸಿದಂತೆ ಸೊಗಸು.<br>( **ಈ ಮೇಲಿನ ಅಂಶಗಳಲ್ಲಿ ಯಾವುದಾದರೂ 4ರಿಂದ 6 ಅಂಶಗಳನ್ನು ನೀಡಿದರೂ ಪೂರ್ಣ ಅಂಕಗಳನ್ನು ನೀಡುವುದು**) | 1<br>1<br>1/2<br>1/2<br>1/2<br>1/2 |

| | | |
|---|---|---|
| II | **ಉರಿಲಿಂಗಪೆದ್ದಿಯ ವಚನಗಳ ಆಶಯವೇನು**? | 4 |
| | ➢ ಉರಿಲಿಂಗಪೆದ್ದಿಯು ಒಬ್ಬ ಮಹತ್ವದ ಚಿಂತಕ. ಪರಶಿವ ಮತ್ತು ಲಿಂಗಗಳ ಅಭೇದ್ಯವನ್ನು ಪ್ರತಿಪಾದಿಸಿರುವನು.<br>➢ ವಿವರಣೆ ನೀಡುವಾಗ ಸೂರ್ಯ-ಹಗಲು, ದೀಪ-ಬೆಳಕು, ಹೂ-ಪರಿಮಳಗಳ ಸರಳ ವಿವರಣೆ.<br>➢ ಲಿಂಗದ ಮೇಲೆ ಲಿಂಗ ಧರಿಸಿದ ಭಕ್ತನು ಇತರ ಲಿಂಗಗಳನ್ನು ನೆನೆಯುವ ಗೊಡವೆಗೆ ಹೋಗನು.<br>➢ ಲಿಂಗವೇ ಸಕಲವೂ ಎಂಬ ಭಾವನೆ ಮೂಡುವುದು ಸರಳವಾಗಿ ವಿವರಣೆ.<br>➢ ಗುರುವಾದವನು ಗುರು, ಲಿಂಗ, ಜಂಗಮಗಳ ತ್ರಿವಿಧವನ್ನು ಗಂಭೀರವಾಗಿ ಅರಿತು ಅನುಸರಿಸಬೇಕು. ಲಘುವರ್ತನದಲ್ಲಿ ಗುರುವಾದವನು ವರ್ತಿಸಬಾರದೆಂದು ಅಭಿಪ್ರಾಯಪಟ್ಟಿರುವನು.<br>➢ ಉರಿಲಿಂಗಪೆದ್ದಿಯ ವಚನಗಳು ಲಿಂಗದ ಮಹತ್ವವನ್ನು ಪ್ರತಿಪಾದಿಸುವ ಆಶಯವನ್ನು ಹೊಂದಿವೆ.<br>( **ಈ ಮೇಲಿನ ಅಂಶಗಳಲ್ಲಿ ಯಾವುದಾದರೂ 4ರಿಂದ 6 ಅಂಶಗಳನ್ನು ನೀಡಿದರೂ ಪೂರ್ಣ ಅಂಕಗಳನ್ನು ನೀಡುವುದು**) | 1<br>1<br>1/2<br>1/2<br>1/2<br>1/2 |

**ಅಥವಾ**

| | | |
|---|---|---|
| | **'ಒಮ್ಮೆ ನಗುತ್ತೇವೆ' ಕವನದಲ್ಲಿ ವ್ಯಕ್ತವಾಗಿರುವ ನಗುವಿನ ವೈಶಿಷ್ಟ್ಯವನ್ನು ವಿವರಿಸಿರಿ.** | **4** |
| | ➢ ಕವಯತ್ರಿ ವಿವರಿಸುವ ನಗುವು ಅತ್ಯಂತ ವಿಶಿಷ್ಟವಾದುದು. ಅದು ಸಮಷ್ಟಿಯ ಹಿತವನ್ನು ಆಶಯವಾಗುಳ್ಳ ನಗು.<br>➢ ಕಷ್ಟಗಳಲ್ಲಿ ಬೇಯುತ್ತಿರುವ ಜೀವಗಳಲ್ಲಿ ನೆಮ್ಮದಿಯ ನಗು ಮೂಡಿದಾಗ ಅರಳುವ ನಗು.<br>➢ ಶಾಶ್ವತವಾಗಿ ಉಳಿಯುವ ಕೊನೆಯಿಲ್ಲದ, ಮೊನೆಯಿಲ್ಲದ ನಗು.<br>➢ ಆಕಾಶದಲ್ಲಿ ಕಾರ್ಮೋಡ ಕವಿಸುವ ನಗು, ಮಳೆಸುರಿಸುವ, ಬೆಳೆಬೆಳೆಸುವ, ಹೊಳೆಹರಿಸುವ ನಗು.<br>➢ ದನಗಳು, ಜನಗಳು ಎಲ್ಲರೂ ಕೂಡಿ ನಗುತ್ತೇವೆ. ಒಬ್ಬರೇ ನಗುವ ನಗುವಲ್ಲ. ಅದು ಎಲ್ಲರೂ ಕೂಡಿ ನಗುವ ನಗುವದು.<br><br>( **ಈ ಮೇಲಿನ ಅಂಶಗಳಲ್ಲಿ ಯಾವುದಾದರೂ 4ರಿಂದ 6 ಅಂಶಗಳನ್ನು ನೀಡಿದರೂ ಪೂರ್ಣ ಅಂಕಗಳನ್ನು ನೀಡುವುದು**) | 1<br><br>1<br><br>1/2<br>1/2<br><br>1/2<br>1/2 |

| | | |
|---|---|---|
| **III** | **ವೇಲಾಯುಧನ ಹೆಂಡತಿಗೆ ಆನೆಯ ಬಗ್ಗೆ ಸವತಿ ಮಾತ್ಸರ್ಯ ಮೂಡಲು ಕಾರಣವೇನು?** | **4** |
| | ➢ ವೇಲಾಯುಧನ ಹೆಂಡತಿಗೆ ಆನೆಯ ಬಗ್ಗೆ ಒಂದು ರೀತಿಯ ವಿಚಿತ್ರವಾದ ಸವತಿ ಮಾತ್ಸರ್ಯವಿತ್ತು. ಆದ್ದರಿಂದಲೇ ವೇಲಾಯುಧ ಆನೆಯ ಜೊತೆ ಮಲಗಲು ಹೊರಟಾಗ ನೀನ್ಯಾವ ಸೀಮೆ ಗಂಡಸು ಎಂದು ಬೈಯ್ಯುಳ.<br>➢ ಚೂರು ತಪ್ಪು ಮಾಡಿದರೂ ತನ್ನನ್ನು ಹಿಡಿದು ಬಡಿಯುವ ಗಂಡನ ಬಗ್ಗೆ ಆಕೆಗೆ ವಿಪರೀತ ಕೋಪ. ಸದರ ಕೊಟ್ಟರೆ ಹೆಣ್ಣಾನೆ ಏನು ಬೇಕಾದರೂ ಮಾಡುತ್ತೆ ಎಂದು ಅವನಿಗೆ ಮೂದಲಿಕೆ.<br>➢ ವೇಲಾಯುಧ ಹಗಲು ರಾತ್ರಿ ಹೆಣ್ಣಾನೆಯೊಂದಿಗೆ ಕೆಲಸಕ್ಕೆಂದು ತಿರುಗುವುದು ಆಕೆಯಲ್ಲಿ ಸವತಿ ಮಾತ್ಸರ್ಯ ಉಂಟಾಗಲು ಕಾರಣ.<br>➢ ಮದುವೆಯಾಗಿ ಹಲವು ವರ್ಷ ಕಳೆದಿದ್ದರೂ ತಾನಿನ್ನು ಬಸುರಿಯಾಗದಿರುವುದು ಆಕೆಗೆ ಆನೆಯ ಮೇಲಿನ ದ್ವೇಷಕ್ಕೆ ಕಾರಣವಾಗಿತ್ತು.<br>➢ ಹೆಣ್ಣಾನೆಯು ವೇಲಾಯುಧನನ್ನು ತುಂಬಾ ಹಚ್ಚಿಕೊಂಡಿದ್ದು ಆನೆ ತನ್ನ ಪ್ರತಿಸ್ಪರ್ಧಿ ಎಂದು ತಿಳಿಯಲು ಕಾರಣ.<br>➢ ಹೆಣ್ಣಾದವಳು ತನ್ನ ಗಂಡ ಯಾವುದನ್ನಾದರೂ ಅತಿಯಾಗಿ ಹಚ್ಚಿಕೊಂಡರೂ ಅದು ತನ್ನ ಆಕರ್ಷಣಶಕ್ತಿಗೆ ಸವಾಲೆಂದು ಭಾವಿಸುತ್ತಾಳೆ. ಇದೇ ಭಾವನೆ ವೇಲಾಯುಧನ ಹೆಂಡತಿಗೆ ಆನೆಯ ಬಗ್ಗೆ ಇತ್ತು ಎನ್ನಬಹುದು.<br>( **ಈ ಮೇಲಿನ ಅಂಶಗಳಲ್ಲಿ ಯಾವುದಾದರೂ 4 ರಿಂದ 5 ಅಂಶಗಳನ್ನು ನೀಡಿದರೂ ಪೂರ್ಣ ಅಂಕಗಳನ್ನು ನೀಡುವುದು**) | 1<br><br>1<br><br>1/2<br><br>1/2<br><br>1/2<br><br>1/2 |

**ಅಥವಾ**

| | | |
|---|---|---|
| | ಎಲ್ಲರ ನಿರೀಕ್ಷೆಗಳು ಸುಳ್ಳಾಗುವಂತೆ ಕೃಷ್ಣೇಗೌಡ ಆನೆಯನ್ನು ಹೇಗೆ ಸಾಕಿದನು? | 4 |
| | ➢ ಕೃಷ್ಣೇಗೌಡ ಗೂಳೂರು ಮಠದ ಆನೆಯನ್ನು, ಅದರ ಮಾವುತ ವೇಲಾಯುಧನ ಸಂಸಾರವನ್ನು ಮೂಡಿಗೆರೆಗೆ ಕರೆತಂದನು.<br>➢ ಜನರೆಲ್ಲ ಅವನ ಕತೆ ಮುಗಿಯಿತೆಂದು ಆಡಿಕೊಂಡರು.<br>➢ ಎಲ್ಲ ತರದ ವ್ಯವಹಾರದಲ್ಲಿ ನಷ್ಟ ಅನುಭವಿಸಿದ್ದ ಕೃಷ್ಣೇಗೌಡನಿಗೆ ಆನೆ ಸಾಕುವುದು ಕಷ್ಟವೆಂಬ ಆಲೋಚನೆ ಜನರದ್ದು.<br>➢ ಆನೆ ಸಾಕುವುದೆಂದರೆ ಎಲೆಕ್ಷನ್ನಿಗೆ ನಿಂತ ಹಾಗೆ. ಮನೆ ಮಠ ಸಂಪೂರ್ಣ ಹಾಳು ಮಾಡಿಕೊಂಡು ಹೆಂಡತಿ ಮಕ್ಕಳ ಬಾಯಿಗೆ ಮಣ್ಣು ಹಾಕುವ ಕ್ಷಿಪ್ರ ಮಾರ್ಗ ಇದೆಂದು ಜನರೆಲ್ಲರೂ ದೃಢವಾಗಿ ನಂಬಿದ್ದರು.<br>➢ ಅದಕ್ಕೆ ತದ್ವಿರುದ್ಧವಾಗಿ ಕೃಷ್ಣೇಗೌಡ ಆನೆ ಸಾಕಿದ.<br>➢ ಮಠದಲ್ಲಿ ಬರಿ ಒಣಹುಲ್ಲು, ಮೊಸರನ್ನ ತಿಂದು ಸೊರಗಿದ್ದ ಆನೆಗೆ, ಬೈನೆ ಸೊಪ್ಪು, ಹಸಿಹುಲ್ಲು, ಹಿಂಡಿ, ಬೆಲ್ಲ, ಗೆಣಸು ಎಲ್ಲವನ್ನು ಕೊಟ್ಟು ಪಗಡುದಸ್ತಾಗಿ ಸಾಕಿದ.<br>**( ಈ ಮೇಲಿನ ಅಂಶಗಳಲ್ಲಿ ಯಾವುದಾದರೂ 4 ರಿಂದ 5 ಅಂಶಗಳನ್ನು ನೀಡಿದರೂ ಪೂರ್ಣ ಅಂಕಗಳನ್ನು ನೀಡುವುದು)** | 1<br>1<br>1/2<br>1/2<br>1/2<br>1/2 |

| | | |
|---|---|---|
| 12 | ಯಾವುದಾದರೂ ಒಂದು ವಿಷಯದ ಬಗ್ಗೆ 150-200 ಪದಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ. | **1X5 =5** |
| | 1 . ಪೀಠಿಕೆ<br>2. ವಿಷಯ ವಿವರಣೆ<br>3. ವಾಕ್ಯ ಸಂಯೋಜನೆ, ಭಾಷಾಶೈಲಿ<br>4. ಉಪಸಂಹಾರ | 1 ಅಂಕ<br>2 ಅಂಕ<br>1 ಅಂಕ<br>1 ಅಂಕ |

| | | |
|---|---|---|
| 13 | ಪತ್ರ ಲೇಖನ | **1X5 =5** |
| | 1. ಇವರಿಂದ<br>2. ಇವರಿಗೆ<br>3. ಸ್ಥಳ, ದಿನಾಂಕ<br>4.. ಮಾನ್ಯರೇ, ವಿಷಯ<br>5. ಪತ್ರದ ಒಡಲು<br>6. ಮುಕ್ತಾಯ<br>7. ಸಹಿ | 1/2<br>1/2<br>1/2<br>1/2<br>2<br>1/2<br>1/2 |

*******************